**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 1241/2019**

**ಪಿಡಬ್ಲೂ–13**

**ಸಿಡಬ್ಲೂ–12**

| | | |
|---|---|---|
| ಸಾಕ್ಷಿದಾರರ ಹೆಸರು | – | ಭಾಸ್ಕರ |
| ತಂದೆಯ ಹೆಸರು | – | ಚಂದ್ರಶೇಖರ |
| ವಯಸ್ಸು | – | 42 ವರ್ಷ |
| ಕೆಲಸ | – | ಮುಖ್ಯ ಪೇದೆ |
| ವಾಸ | – | ಬೈಲಕುಪ್ಪೆ |

**ದಿನಾಂಕ 14–11–2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ದಿಃ 05.10.2009 ರಿಂದ ದಿಃ 26.06.2015 ವರೆಗೆ ಬೈಲಕುಪ್ಪೆ ಪೋಲಿಸ್ ಪೇದೆ ಆಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 23.09.2010 ರಂದು ಪಿರಿಯಾಪಟ್ಟಣ ರಾತ್ರಿ ಪಾಳ್ಯದಲ್ಲಿ ಚಾಸಾ 15 ರವರ ಜೊತೆ ನಾನು ಹಾಗೂ ಚಾಸಾ 13 ಮತ್ತು ಜೀಪ ಚಾಲಕರಾದ ಚಾಸಾ 14 ರವರ ಜೊತೆ ಗಸ್ತಿನಲ್ಲಿದ್ದಾಗ ಅಂದು ರಾತ್ರಿ 1 ಗಂಟೆ ಸಮಯದಲ್ಲಿ ಚಾಸಾ 19 ರವರು ಚಾಸಾ 15 ರವರಿಗೆ ದೂರವಾಣಿ ಕರೆ ಮಾಡಿ ಆ ದಿನದ ರಾತ್ರಿ 12.40 ಗಂಟೆಯ ಸಮಯದಲ್ಲಿ ಪಿರಿಯಾಪಟ್ಟಣ ಠಾಣಾ ಸರಹದ್ದು ಹಾರನಹಳ್ಳಿ ಗೇಟ್ ಬಳಿ ಹಾದು ಹೋಗಿರುವ ಪಿರಿಯಾಪಟ್ಟಣ ಮತ್ತು ಕುಶಾಲನಗರ ಮುಖ್ಯ ರಸ್ತೆಯಲ್ಲಿ ಒಂದು ಕ್ಯಾಂಟರ್ ವಾಹನದಲ್ಲಿದ್ದ ಸತೀಶ, ಆನಂದ ಮತ್ತು ಪ್ರಭಾಕರರವರನ್ನು ಒಂದು ಮೋಟಾರ್ ಸೈಕಲ್ ಸಂಖ್ಯೆ ಕೆಎ–13–ಆರ್–9029 ರ ಬಜಾಜ್ ಡಿಸ್ಕವರ ಬೈಕಿನಲ್ಲಿ ಇಬ್ಬರು ವ್ಯಕ್ತಿಗಳು ಸದರಿ ಕ್ಯಾಂಟರ್ ನ್ನು ಅಡ್ಡಗಟ್ಟಿ ನಾವು ಪೋಲಿಸರು ಎಂದು ಅವರಿಗೆ ಹೆದರಿಸಿ ಅವರ ಮೇಲೆ ಹಲ್ಲೆ ಮಾಡಿ ಸದರಿ ಕ್ಯಾಂಟರ್ ವಾಹದಲ್ಲಿದ್ದವರಿಂದ ಹಣ ಮತ್ತು ಮೊಬೈಲ್ ನ್ನು ಕಿತ್ತುಕೊಂಡಿರುವುದಾಗಿ ತಿಳಿಸಿ

ಸದರಿ ವ್ಯಕ್ತಿಗಳನ್ನು ಪತ್ತೆ ಮಾಡಿ ವಶಕ್ಕೆ ಪಡೆದು ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ಚಾಸಾ 15 ರವರೊಂದಿಗೆ ನಾನು ಮತ್ತು ಚಾಸಾ 13, 14 ರವರು ಪಿರಿಯಾಪಟ್ಟಣ ಪೋಲಿಸ್ ಠಾಣೆಗೆ ಇಲಾಖೆ ಜೀಪಿನಲ್ಲಿ ತೆರಳಿ ಠಾಣೆಯಲ್ಲಿದ್ದ ಹಲ್ಲೆಗೊಳಗಾದ ಚಾಸಾ 9, 10 ಮತ್ತು 11 ರವರನ್ನು ಕರೆದು ವಿಚಾರಿಸಿ ಅವರ ಮೇಲೆ ಹಲ್ಲೆ ಮಾಡಿದ ಆರೋಪಿಗಳನ್ನು ಮತ್ತು ದ್ವಿ ಚಕ್ರ ವಾಹನ ತೋರಿಸುವ ಸಂಬಂದ ಅವರನ್ನು ಜೊತೆಯಲ್ಲಿ ಕರೆದುಕೊಂಡು ರಾತ್ರಿ 2 ಗಂಟೆ ಸಮಯದಲ್ಲಿ ಠಾಣೆಯಿಂದ ಹೊರಟು 3 ಗಂಟೆ ಸಮಯದಲ್ಲಿ ಹುಣಸೇವಾಡಿ ಸರ್ಕಲ್ ನ ಬಿ.ಎಂ ರಸ್ತೆಯ ದಕ್ಷಿಣ ಭಾಗದಲ್ಲಿರುವ ಬಸ್ ಶೆಲ್ಟರ್ ನಲ್ಲಿ ಇಬ್ಬರು ವ್ಯಕ್ತಿಗಳು ಒಂದು ಬೈಕ್ ನ್ನು ನಿಲ್ಲಿಸಿಕೊಂಡು ನಿಂತಿದ್ದು ಕಂಡುಬಂತು.  ಆಗ ಚಾಸಾ 15 ರವರು ಜೀಪನ್ನು ನಿಲ್ಲಿಸಲು ಸೂಚಿಸಿದ ಮೇರೆಗೆ ನಾವು ಜೀಪಿನಿಂದ ಇಳಿದು ಅಲ್ಲಿ ಇದ್ದ ಇಬ್ಬರು ವ್ಯಕ್ತಿಗಳನ್ನು ಸುತ್ತುವರೆದು ನಮ್ಮ ಜೊತೆಯಲ್ಲಿದ್ದ ಚಾಸಾ 9 ರಿಂದ 11 ರವರು ಆ ವ್ಯಕ್ತಿಗಳನ್ನು ನೋಡಿ ಸದರಿ ವ್ಯಕ್ತಿಗಳೇ ತಾವು ಪೋಲಿಸರೆಂದು ನಮ್ಮ ಬಳಿ ಸುಳ್ಳು ಹೇಳಿ ನಮ್ಮನ್ನು ತಡೆದು ನಮ್ಮ ಮೇಲೆ ಹಲ್ಲೆ ನಡೆಸಿ ನಮ್ಮ ಮೊಬೈಲ್ ಮತ್ತು ಹಣವನ್ನು ಕಿತ್ತುಕೊಂಡ ವ್ಯಕ್ತಿಗಳಾಗಿರುತ್ತಾರೆ ಹಾಗೂ ಅಲ್ಲಿಯೇ ಇದ್ದ ಬೈಕಿನಲ್ಲಿಯೇ ನಮ್ಮನ್ನು ಬಂದು ತಡೆದರು ಎಂದು ಗುರುತಿಸಿದ ಮೇರೆಗೆ ಅವರಿಬ್ಬರನ್ನು ನಾವು ವಶಕ್ಕೆ ಪಡೆದು ಅವರನ್ನು ವಿಚಾರಿಸಲಾಗಿ ಒಬ್ಬಾತನ ಹೆಸರು ಮಣಿಕಂಠ ಬಿನ್ ಈರೇಗೌಡ, ಜೋಡಿಗುಬ್ಬಿ ಗ್ರಾಮ, ಹೊಳೆನರಸೀಪುರ ತಾಲ್ಲೂಕು ಎಂದು ತಿಳಿಸಿದ್ದು ಮತ್ತೊಬ್ಬರು ತನ್ನ ಹೆಸರು ಪ್ರಕಾಶ ಬಿನ್ ಕಾಳೇಗೌಡ, ಜೋಡಿಗುಬ್ಬಿ ಗ್ರಾಮ, ಹೊಳೆನರಸೀಪುರ ತಾಲ್ಲೂಕು ಎಂದು ತಿಳಿಸಿದ ಮೇರೆಗೆ ಅವರನ್ನು ನಮ್ಮ ವಶಕ್ಕೆ ತೆಗೆದುಕೊಂಡು ಅಂದು ಬೆಳಗಿನ ಜಾವ 03.30 ಗಂಟೆಗೆ ಪಿರಿಯಾಪಟ್ಟಣ  ಪೋಲಿಸ್ ಠಾಣೆ ಚಾಸಾ 19 ರವರ ಸಮಕ್ಷಮ ಹಾಜರುಪಡಿಸಿರುತ್ತೇವೆ. ಸದರಿ ಇಬ್ಬರು ವ್ಯಕ್ತಿಗಳನ್ನು ಚಾಸಾ 19 ರವರು ನಮ್ಮ ಸಮಕ್ಷಮ ವಿಚಾರಣೆ ಮಾಡಿಲಾಗಿ ಆ ವ್ಯಕ್ತಿಗಳು ದಿಃ 07.09.2010 ರಂದು ಚನ್ನರಾಯಪಟ್ಟಣ ತಾಲ್ಲೂಕು, ಮುದ್ದೇನಹಳ್ಳಿಯ ಬಳಿ ತಡೆದು ಅವರಿಗೂ ಕೂಡ ಪೋಲಿಸರೆಂದು ಸುಳ್ಳು ಹೇಳಿ ಅವರ ಮೇಲೆ ಹಲ್ಲೆ ನಡೆಸಿ ಅವರಿಂದ ಬಲವಂತವಾಗಿ 8,700/- ಹಣ ಹಾಗೂ ಮೊಬೈಲ್ ನ್ನು ಕಿತ್ತುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ.  ಸದರಿ ಆರೋಪಿತರಿಗೆ ಕುಡಿಯುವ ಚಟ, ಸಿನಿಮಾ ನೋಡುವ ಚಟ ಇರುವುದಾಗಿ ಒಪ್ಪಿಕೊಂಡಿರುತ್ತಾರೆ. ಬಲವಂತವಾಗಿ ಕಿತ್ತುಕೊಂಡ ಮೊಬೈಲ್ ಮತ್ತು ಹಣದಲ್ಲಿ ಹಣವನ್ನು ಖರ್ಚು ಮಾಡಿಕೊಂಡು ಮೊಬೈಲ್ ನ್ನು

ದಾರಿಹೋಕರಿಗೆ ಮಾರಾಟ ಮಾಡಿ ಬಂದ ಹಣವನ್ನು ಖರ್ಚು ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ.

2. ದಿಃ 23.09.2010 ರಂದು ರಾತ್ರಿ ಕೆ ಆರ್ ನಗರಕ್ಕೆ ಬಂದು ಕೆ ಆರ್ ನಗರ ಬೆಟ್ಟದಪುರ ಮಾರ್ಗವಾಗಿ ತಂದ್ರೆಗುಡಿ ಕೊಪ್ಪಲು ಬಳಿ ಒಂದು ಆಟೋವನ್ನು ತಡೆದು ಅವರಿಗೂ ಕೂಡ ಪೋಲಿಸರೆಂದು ಸುಳ್ಳು ಹೇಳಿ ಅವರ ಮೇಲೆ ಹಲ್ಲೆ ನಡೆಸಿ ಅವರಿಂದ ಬಲವಂತವಾಗಿ 200/- ಹಣ ಹಾಗೂ 2 ಮೊಬೈಲ್ ಗಳನ್ನು ಕಿತ್ತುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ನಂತರ ಮಾಯಿಗೌಡಹನಹಳ್ಳಿ ಗ್ರಾಮದ ರೈಸ ಮಿಲ್ ಹತ್ತಿರ ನಡೆದುಕೊಂಡು ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ತಡೆದು ಅವರಿಗೂ ಕೂಡ ಪೋಲಿಸರೆಂದು ಸುಳ್ಳು ಹೇಳಿ ಅವರ ಮೇಲೆ ಹಲ್ಲೆ ನಡೆಸಿ ಅವರಿಂದ ಬಲವಂತವಾಗಿ 1 ವಾಚ್ ಮತ್ತು 1 ಮೊಬೈಲ್ ನ್ನು ಕಿತ್ತುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ನಂತರ ಪಿರಿಯಾಪಟ್ಟಣ ತಾಲ್ಲೂಕು ಹಾಲನಹಳ್ಳಿ ಬಳಿ ಕ್ಯಾಂಟರ್ ನ್ನು ತಡೆದು ಅವರಿಗೂ ಕೂಡ ಪೋಲಿಸರೆಂದು ಸುಳ್ಳು ಹೇಳಿ ಅವರ ಮೇಲೆ ಹಲ್ಲೆ ನಡೆಸಿ ಅವರಿಂದ ಬಲವಂತವಾಗಿ 3,000/- ಹಣ ಹಾಗೂ 2 ಮೊಬೈಲ್‌ಗಳನ್ನು ಕಿತ್ತುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ನಂತರ ಚೌಡನಹಳ್ಳಿ ಕೆರೆಯ ಬಳಿ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿದ್ದ ವ್ಯಕ್ತಿಯನ್ನು ತಡೆದು ಅವರಿಗೂ ಕೂಡ ಪೋಲಿಸರೆಂದು ಸುಳ್ಳು ಹೇಳಿ ಅವರ ಮೇಲೆ ಹಲ್ಲೆ ನಡೆಸಿ ಅವರಿಂದ ಬಲವಂತವಾಗಿ 503/- ಹಣ ಹಾಗೂ 1 ಮೊಬೈಲ್‌ನ್ನು ಕಿತ್ತುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ವಿಶಾಲವಿದ್ಯಾಸಂಸ್ಥೆ ಬಳಿ ಹೋಗುತ್ತಿದ್ದ ಆಟೋ ತಡೆದು ಅವರಿಗೂ ಕೂಡ ಪೋಲಿಸರೆಂದು ಸುಳ್ಳು ಹೇಳಿ ಆಟೋ ಚಾಲಕನ ಮೇಲೆ ಹಲ್ಲೆ ನಡೆಸಿ ಅವರಿಂದ ಬಲವಂತವಾಗಿ 1,000/- ಹಣ ಕಿತ್ತುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಅವರು ಸುಳ್ಳು ಹೇಳಿ ಕಿತ್ತುಕೊಂಡ ಹಣವನ್ನು ಅಂದು ರಾತ್ರಿ ಮಳೆ ಬರುತ್ತಿದ್ದ ಕಾರಣ ಹುಣಸವಾಡಿ ಸರ್ಕಲ್ ಬಳಿಯ ಬಸ್ ನಿಲ್ದಾಣದ ಬಳಿ ನಿಂತುಕೊಂಡು ಹಣವನ್ನು ಹಂಚಿಕೊಳ್ಳುತ್ತಿದ್ದಾಗ ಪೋಲಿಸರು ತಮ್ಮನ್ನು ವಶಕ್ಕೆ ಪಡೆದಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

(ಸದರಿ ವಾಹನವು ಪಿರಿಯಾಪಟ್ಟಣ ಪೋಲಿಸ್ ಠಾಣೆ ಪಿ.ಎಫ್ ಸಂಖ್ಯೆ 139/10 ರಲ್ಲಿ ರ ಪ್ರಕರಣದಲ್ಲಿ ವಶಕ್ಕೆ ಪಡೆದಿದ್ದು ಸದರಿ ವಾಹನದ ಪೋಟೋ ಈ ಪ್ರಕರಣದಲ್ಲಿ ಲಗತ್ತಿಸದ ಕಾರಣ ಅದನ್ನು ನಿಶಾನೆಗೆ ಒಳಪಡಿಸಿರುವುದಿಲ್ಲ.)

**<u>ಪಾಟೀ ಸವಾಲು ಶ್ರೀ ಕೆ.ಪಿ.ಎಮ್ ಆರೋಪಿತರ ಪರ ವಕೀಲರಿಂದಃ</u>**

ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಕ್ಯಾಂಟರ್ ಮತ್ತು ದ್ವಿಚಕ್ರ ವಾಹನದ ಸಂಖ್ಯೆಯನ್ನು ನಾನು ನನ್ನ ಕೈ ಮೇಲೆ ಬರೆದುಕೊಂಡು ಹೇಳಿದ್ದೇನೆ ಎಂದರೆ ಕ್ಯಾಂಟರ್ ಮತ್ತು ದ್ವಿ ಚಕ್ರ ವಾಹನದ ಸಂಖ್ಯೆಗಳನ್ನು ಗುರುತಿಗಾಗಿ ಬರೆದುಕೊಂಡಿದ್ದೆ ಸುಮಾರು 12 ವರ್ಷವಾದ ಕಾರಣ ನೆನಪಿಗಾಗಿ ಬರೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

2. ಗಸ್ತಿಗೆ ಹೋದಾಗ ಜೀಪಿನಲ್ಲಿ ಲಾಗ್ ಬುಕ್ ಇರುತ್ತದೆ ಎಂದರೆ ಸರಿ. ಲಾಗ್ ಬುಕ್ ನಲ್ಲಿ ಗಸ್ತಿನಲ್ಲಿ ನಡೆಯುವ ವಿಚಾರಗಳನ್ನು ಬರೆಯಲಾಗುತ್ತದೆ ಎಂದರೆ ವಿಚಾರಗಳನ್ನು ಬರೆಯುವುದಿಲ್ಲ ಸ್ಥಳ ಮತ್ತು ಸಮಯ ಮಾತ್ರ ಜೀಪಿನ ಚಾಲಕ ಬರೆಯುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಅಂದು ನಾನು ರಾತ್ರಿ ಪಾಳ್ಯದ ಗಸ್ತಿನಲ್ಲಿದ್ದೆ ಎಂದು ಹೇಳಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸದರಿ ಪ್ರಶ್ನೆ ತನಿಖಾಧಿಕಾರಿಗೆ ಅನ್ವಯಿಸುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ದಿನ ಆರೋಪಿತರು ಧರಿಸಿದ್ದ ಬಟ್ಟೆಯ ಬಣ್ಣ ಯಾವುದು ಎಂದು ನನಗೆ ನೆನಪಿಲ್ಲ, ಸಾಕ್ಷಿ ಮುಂದುವರೆದು ಒಬ್ಬ ವ್ಯಕ್ತಿ ಜೀನ್ಸ ಮತ್ತು ಟಿಶರ್ಟ್ ಮತ್ತು ಮತ್ತೊಬ್ಬ ಪ್ಯಾಂಟ್ ಮತ್ತು ಶರ್ಟ್ ಧರಿಸಿದ್ದ ಎಂದು ನುಡಿಯುತ್ತಾರೆ.

3. ಯಾರ್ಯಾರು ಏನನ್ನು ಹಂಚಿಕೊಳ್ಳುತ್ತಿದ್ದರು ಎಂಬಪ್ರಶ್ನೆಗೆ ಮೊಬೈಲ್ ಮತ್ತು ಹಣ ಇತ್ತು ಆದರೆ ನಿರ್ದಿಷ್ಟವಾಗಿ ಯಾರ ಬಳಿ ಏನು ಇತ್ತು ಎಂದು ಆ ಸಮಯದಲ್ಲಿ ನಮಗೆ ಗುರುತಿಸಲು ಆಗಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿತರನ್ನು ಹಿಡಿದ ಸಂದರ್ಭದಲ್ಲಿ ನಾವು ನಮ್ಮ ಅಂಗಶೋಧನೆ ಮಾಡಿಕೊಳ್ಳಲಿಲ್ಲ. ಆ ದಿನ ನಾನ ಕರ್ತವ್ಯದಲ್ಲಿ ಇರಲಿಲ್ಲ, ಸ್ಥಳಕ್ಕೆ ಹೋಗಿಲ್ಲ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಸಮಕ್ಷಮ ಚಾಸಾ 19 ಆರೋಪಿತರ ವಿಚಾರಣೆ ನಡೆಸಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ವಶಕ್ಕೆ ಪಡೆದ ಸಮಯದಲ್ಲಿ ಮಹಜರ್ ಬರೆದಿಲ್ಲ. ಸ್ಥಳದಲ್ಲಿ ಆರೋಪಿತರು ಇರಲಿಲ್ಲ ಮತ್ತು ದ್ವಿ ಚಕ್ರ ವಾಹನವು ಇರಲಿಲ್ಲ ಎಂದರೆ ಸರಿಯಲ್ಲ.

ಆರೋಪಿತರ ವಿರುದ್ಧ ಉದ್ದೇಶಪೂರ್ವಕವಾಗಿ ಪ್ರಕರಣ ದಾಖಲಾಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> – ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ